"SATYAVADI" Supplement Regd No M 1299

ಸತ್ಯವಾದಿ

ರಮಣೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯರಿಂದ ಪ್ರತಿಷ್ಠಿತಪಾದದು

(Founded 1917

Proprietors—The Satyavadi Limited, Mysore

ವಾರ್ಷಿಕ ಚಂದಾ ಸ್ಥಳಕ್ಕೆ ರೂ. 1—0—(

ಪರಸ್ಥಳಕ್ಕೆ ಅಂಚೆ ವೆಚ್ಚ ಸೇರಿ 1—10—(

ಸಂಪುಟ 25 ಸಂಚಿಕೆ 2] ಭಾನುವಾರ 8-9-1940 ಬಿಡಿಪ್ರತಿ 3 ಕಾಸ

VIVE LE MAHARAJA !

His Highness Sri Chama Raja
Wodeyar Bahadur, B. A.,
Maharaja of Mysore

ಜಯು ಶ್ರೀಚಾಮರಾಜೇಂದ್ರ | ರತ್ನ ಸಿಂಹಾಸನೇಶ್ವರ |
ಭಾಗ್ಯಪ್ರಯಾಪಾಹಿ | ಚಿರಂಕರ್ನಾಟವಂಡಲಂ ||

MYSORE
5-9-1940

THE
"SATYAVADI"
MYSORE

ದಿವಾನ್‌ರವರ ಸಂದೇಶ

ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರರವರ ಪಟ್ಟಾಭಿಷೇಕ ಮಹೋತ್ಸವವು ಇದೇ ವಿಕ್ರಮನಾಮ ಸಂವತ್ಸರ ಭಾದ್ರಪದ ಶುದ್ಧ ಸಪ್ತಮಿ ಭಾನುವಾರದ ಶುಭದಿನ ನಡೆಯುವುದರ ಸಂತೋಷಾರ್ಥವಾಗಿ ಮೈಸೂರು ಸಂಸ್ಥಾನದ ನಾನಾ ಕನ್ನಡ ಪತ್ರಿಕೆಗಳೂ ವಿಶೇಷ ಸಂಚಿಕೆಗಳ ಮೂಲಕ ತಮ್ಮ ರಾಜಭಕ್ತಿ, ವಿಶ್ವಾಸಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಿರುವುದು ಶ್ಲಾಘ್ಯವಾದ ಕಾರ್ಯ. ಮೈಸೂರು ನಗರದ "ಸತ್ಯವಾದಿ" ಪತ್ರಿಕೆಯು ಅವುಗಳ್ಲೊಂದು. ರಾಜಭಕ್ತಿ, ವಿಶ್ವಾಸಗಳಿಂದ ಕೂಡಿ ಈ ರೀತಿ ವ್ಯವಸ್ಥೆ ಮಾಡಿರುವುದಕ್ಕಾಗಿ ನಾನು "ಸತ್ಯವಾದಿ" ಪತ್ರಿಕೆಯ ಸಂಪಾದಕರನ್ನು ಅಭಿನಂದಿಸುತ್ತೇನೆ. ಅವರ ಪ್ರಯತ್ನವು ಸಫಲವಾಗಲೆಂದು ನಾನು ಮನಃಪೂರ್ವಕವಾಗಿ ಹಾರೈಸುತ್ತೇನೆ.

Mirza M. Ismail
ಮೈಸೂರು ಸಂಸ್ಥಾನದ ದಿವಾನ್‌ರವರು.

ಶ್ರೀ ಜಯಚಾಮರಾಜೇಂದ್ರ ಒಡೆಯರವರ
ಪಟ್ಟಾಭಿಷೇಕ

ಶ್ರೀಕರ ಶುಭಕರ ಯದುಕುಲತಿಲಕ |
ಶ್ರೀ ಯದುಮಣಿರತ್ನ ಯದುಕುಲಪದಕ ||
ಜಯ ಜಯ ಜಯ ಶ್ರೀ |
ಜಯ ಚಾಮರಾಜೇಂದ್ರ ||
ಯದುಕುಲ ದೀಪಕ ಯಾದವ ಕುಮಾರ |
ಯದುಗಂಭೀರ ಯಾದವಧೀರ ||
ಚಾಮುಂಡಿ ಕುಲದೇವಿ ಯದುಕುಲ ಮಾತೆ |
ಚಾಮುಂಡಿ ಮಹಿಸೂರ ಕಾಯ್ವ ಸಿರಿಧಾತೆ ||
ಮಹಿಸೂರ ಸಿರಿರತ್ನ ರತ್ನಸಿಂಹಾಸನದಲಿ |
ಮಂಡಿಸಿ ನಲವಿನಲಿ ಪೊರೆಯುವ ನೃಪತಿ ||
ರಾರಾಜಿಸುವ ಸಿರಿಮಹಿಸೂರ ಸಗ್ಗದಲಿ |
ರಾರಾಜಿಸಿ ಮೆರೆವ ಯಾದವ ಬಾಲಚಂದ್ರ ||
ಜೇಂಕರಿಸಿ ಜಂಜಡದೆ ಜಯಲಾಭ ಪೊಂದಿ |
ಜೇಂಕರಿಸಿ ಜನಾರ್ಥಾಭಿಷ್ಟತೆ ಜೀವವ ನೀಡಿ ||
ದ್ರವಿರೂಪತೆರದಲಿ ಇರ್ಪ ಪೃದುಮನವು |
ದ್ರವಿಸಿ ಕರಗಿ ಹರಿಯುವ ಕರುಣೆಯ ಹೃದಯವು ||
ಒಲವು ಒಲುಮೆಯ ಪೊಂದಿ ಒಸೆವವರು ಒನರು |
ಒಲವ ಒಡರಿಸಿ ಒಂದಿ ಅದರಿಪರು ಎರೆಯನನು ||
ಡೆ ಎಂಬ ಅಕ್ಷರದಿ ಅವಿತಿದೆ ಅರ್ಥ ಎ |
ಡೆಯಾಗಬೇಡ ಬನ್ನ ಒಡಿಸುವವನ ಹತ್ರ ||
ಯದುವಂಶ ರಾಜರು ಧರೆಯೊಳಗೆ ಮೆರೆಟುಲಿ |
ಯದುಕೀರ್ತಿ ಬೆಳಗಲಿ ಸರ್ವ ವಿಶ್ವದಲಿ ||
ರವಿಯಾರೂಢರಾರೋಗ್ಯ ಭಾಗ್ಯಗಳ ಕೊಡಲಿ |
ರವಿಚಂದ್ರರು ಸದ್ಯ ಶಶ್ವಂದ್ರಿಕೆಯು ಬೆಳಗಲಿ ||
ಪಟ್ಟಾಭಿಷೇಕ ಶುಭಮಹೋತ್ಸವವು |
ಪರಿತೋಷದಿಂದ ನಡೆಯಲಿ ಸರ್ವ ವಿಭವದೊಳ್ ||
ಟ್ಟಾ ಎಂಬ ಅಕ್ಷರದ ಆಕಾರ ಇಲ್ಲ ಅಟ್ಟಹಾಸದಲಿ ಪ |
ಟ್ಟಾಭಿಷೇಕವು ನಡೆಯುವುದು ಅಟ್ಟಹಾಸದಲಿ ||
ಭೀಕರ ಕದನವು ನಡೆಯುತಿದೆ ಪಶ್ಚಿಮದಲಿ |
ಭೀಕರ ಕದನವು ಶಾಂತಿಪೊಂದಲಿ ಈ ಸಮಯದಿ ||
ಷೇಕ್ಸಪಿಯರ್ ಕಾಳಿದಾಸರಂತ ಕವಿಗಳು ಓಲಗದಿ ನಿ |
ಷೇಯನು ಅಡಗಿಸಿ ಬೆಳಗಿ ನವಯುಗವ ಕರೆದು ||
ಕರ್ನಾಟಕ ದೇಶದೊಡೆಯರು ನಮ್ಮ ನವಪ್ರಭುಗಳು |
ಕಳಿಗೂಡಿ ಬಾಳಲಿ ಆ ಶ್ವೇತಛತ್ರದಡಿಯಲಿ ||

ಶ್ರೀ॥ ರಾಮಕೃಷ್ಣ.

ಶ್ರೀ ಜಯಚಾಮರಾಜೇಂದ್ರ ಒಡೆಯರವರ

ಪಟ್ಟಾಭಿಷೇಕ

[ಲೇಖಕರು—ಎಸ್. ರಾಮಕೃಷ್ಣ, ಜೂ. ಇಂಟರ್ ಆರ್ಟ್ಸ್,
ಇಂಟರ್‌ಮೀಡಿಯೆಟ್ ಕಾಲೇಜ್ ಮೈಸೂರು.]

ನವತರುಣ ಪ್ರಭುಗಳು—

ಜ್ಯೋತಿಗಳ ಮುಖ್ಯದಲಿ ಬೆಳಗುವ ಜ್ಯೋತಿ।
ಹೂಗಳ ಮುಖ್ಯದಲಿ ಬೀರುವ ಕಂಪು।
ತರುಣರ ಮುಖ್ಯದಲಿ ನಲಿಯುವ ತರುಣ।
ನಾಡಿನ ನಲುವಿನ ಹಸುನಗೆಯ ಕಿರುಣ।
ವಯಸಿನಲಿ ಕಿರಿಯರು ತರುಣರಲಿ ತರುಣರು।
ಸೌಶೀಲ್ಯ ಸಂಪನ್ನರು, ವಿವೇಕಶಾಲಿಗಳು।
ಕಾರ್ಯತತ್ಪರರು ಆಸಕ್ತಿ ನಿರತರು।
ವಿದ್ಯಾವಿಶಾರದರು ವಿಶ್ವಾನುಭವಿಗಳು।
ರಾಜನೀತಿಜ್ಞರು ನೀತಿವಿಶಾರದರು॥
ತರುಣರಲಿ ತರುಣರು ಇಂದು ನನ್ನ ಪ್ರಭುಗಳು।
ಕನ್ನಡ ನಾಡಿನ ತರುಣರು ಶ್ರೀ ರಾಜಕುಮಾರರು॥
ಇದು ಮಹಿಸೂರ ಭಾಗ್ಯ ಇದು ಮಹಿಸೂರ ಹೆಮ್ಮೆ।
ಮೈಸೂರ ಸಿರಿರತ್ನ ಗದ್ದಿಗೆಯನು ಏರಿ।
ರಾಜರ್ಷಿ ಹಿರಿಯರು ನಡೆಪ ಮಾರ್ಗದಲಿ।
ನಡೆಸು ಸಿರಿಯ ಮೈಸೂರನ್ನು ಖ್ಯಾತಿಗೊಳಿಸಿ॥
ಸಕಲ ಸುಖ ವಿಭವದೊಳ್ ಸರ್ವದಾ ಮೆರೆಯಿರಿ।
ದುರ್ಗ ಚಾಮುಂಡಿ ಶ್ರೀಕಂಠ ಶ್ರೀರಂಗ।
ಶ್ರೀವರ ಶಿವಸುತ ವರಗಣ ನಾಯಕ।
ಸಕಲ ಆಯುರಾರೋಗ್ಯವನು ಭೂಪಾಲಿಪ ಶಕ್ತಿಯನು।
ನವಪ್ರಭುವರ್ಯರಿಗೆ ಕರುಣಿಸಿ ಸಲಹೋ॥

ಪಟ್ಟಾಭಿಷೇಕ ವಾರ್ತೆ—

ದಿನಪತಿಯ ಆಗಮನವಂ।
ಕಂಡು ಸರಸಿಯ ಸರೋಜಕ್ಕೆ॥
ಅದು ಮೆಂತುಂ ಅಪರಿಮಿತೆ ಆನಂದವು।
ಅವೆರ ಮಿಗಿಲಾಗಿ ನವ ಕುಮಾರರ।
ಪಟ್ಟಾಭಿಷೇಕ ವಾರ್ತೆಯಂ ಕೇಳಿ।
ನಾಡಿನ ಜನರಿಗೆ ಅದು ಮೆಂತುಂ॥
ಈ ಶುಭಮುಹೂರ್ತ ಸಮಯದೊಳ್।
ಅಪರಿಮಿತ ಹರ್ಷ ಆನಂದವು।
ನವಪ್ರಭುವರ್ಯರು ಚಿರಕಾಲ ಸೌಖ್ಯದಲಿ।
ಸಿರಿ ವಿಭವದೊಳ ಸುಖದಲಿ ಬಾಳಲಿ॥

ಅಭಿನಂದನೆಗಳು—

ಮಹಿಸೂರ ರತ್ನಸಿಂಹಾಸನದಲಿ।
ಮುಂಡಿಸಿ ವಿರಾಜಿಸುವ।
ನದತರುಣ ಪ್ರಭುಗಳ।
ಪಟ್ಟಾಭಿಷೇಕ ವಾರ್ತೆಯನು॥
ಕೇಳಿ ಅಪರಿಮಿತ ಹರ್ಷ ಆನಂದವು।
ನಮ್ಮಯ ಕಣ್ಮನಗಳಿಗೆ।
ಸನ್ಮಂಗಳಗಳನು ನೀಡಲು।
ಕಂಕಣವಂ ಕಟ್ಟಿ ನಿಂತ॥
ನೂತನ ಪ್ರಭುವರ್ಯರಾದ।
ಶ್ರೀ ಜಯಚಾಮರಾಜರಿಗೆ॥
ಮಹಾರಾಣಿಯವರ ಸನ್ನಿಧಿಗೆ॥

ರಾಜ್ಯಾಭಿಷೇಕ ಮಹೋತ್ಸವಾವಸರೆ

ಸೂಕ್ತಿ ಮಣಿ ಮಾಲಾ

ಆಯುರಾರೋಗ್ಯಸೌಭಾಗ್ಯ ಪ್ರಾಜ್ಯಸಾಮ್ರಾಜ್ಯ ವೈಭವಂ।
ದದಾತು ಗಿರಿಜಾಜಾನಿಃ ಜಯ-ಚಾಮಮಹೀಭೃತೆ॥ ೧॥

ಅರ್ಯಮಣಿ ದ್ವಿಜರಾಜೆ ಸುಮಂಗಲೆ ಗೀಃಪತೀಷ್ಟಕಲೌ।
ಸೂರ್ಯಾನಸ್ತನಹೆತೌ ಜಯ-ಚಾಮೆನ್ದ್ರಗ್ರಹಾಃ ಪ್ರಸೀದಂತು ॥ ೨॥

ರಾಜದ್ರಾಜಕಲಃ ಚಲತ್ಸುರಸರಿತ್ಕಲ್ಲೋಲ ಲೋಲಾಕುಲಃ।
ರಾಜನ್ಮದ್ಧಫಣಿನ್ದ್ರಪ್ಲೋತ್ಕೃತಿಚಲದ್ಭಸ್ಮ ಪ್ರಭಾಭಾಸ್ವರಃ॥
ಹರರಿಸೋತ್ಫುಲ್ಲಕಪೊಲ ಪಾಲ್ಯಸುಚಿರೊದ್ದಾರಾಯತಾರಾದರಃ।
ನಿತ್ಯಾನಂದ ಮಯಃ ಸಚಾಮನೃಪತಿಂ ಪಾಯನ್ಮಹಿಷ್ಯಾಯುತಮ್ ॥ ೩॥

ಪಾಯಾತ್ಸಾಂ ಪಾರ್ವತೀಶಃ ಪ್ರಮಥಸುರಗಣೈಃ ಪಾರ್ಶ್ವಿತ ಪಾರ್ಶ್ವಣೆನ।
ಪ್ರಕ್ಯಾಸ್ತೇರಾಜ್ಯಧುರ್ಯೇಽಪ್ರತಿಹತಮುದಿಯಾತ್ಪಾರಗತ್ವಂ ಮುದಾಶೇ॥
ಸಾನ್ನಿಧ್ಯೇಸೈವಪಾಣೀ ಶುಭಮಿಹತನುತಾಂ ಪಾರ್ಥಿವಾನಾಮ್ಮುದಾಜೆ।
ಪ್ರಖ್ಯಾತಾ ಮಾತ್ಸ್ಯೈಸ್ಸಮಮನುಸಮಯಂ ಪೊಷಯು ತ್ಸಂಪ್ರಜಾಃಸ್ವಾಃ॥ ೪॥

ಜಯ ಗುಣಿಷು-ಕೃತಾದರ ಮಹಿಶೂರೇಶ್ವರ ಶಸ್ತ್ರಭೃತಾಂಪರ ಶಿಷ್ಟುಮತೇ
ಶ್ರಿತತಾಸಹೃತೆ।
ಜಯ ಮರ್ತ್ಯವುರಂದರ ಸತ್ಯಧುರಂಧರ ಕೀರ್ತಿಸುಧಾಕರ ಪುಣ್ಯಕೃತೇ।
ನೃಪರಾಜನುತೇ।
ಜಯ ಭೂಮಿಭೃತಾಂಪರ ಭೂಪತಿಕುಂಜರ ದಾನಪಯೋಧರ ದುಷ್ಟಹೃತೇ
ದ್ವಿಜರಾಜಪತೇ।
ಜಯ ಗುಣರತ್ನಾಕರ ಜಯಚಾಮೇಶ್ವರ ವಿಬುಧಪುಸಸ್ಸರ ಭವತುಸತೆ, ಕುಶಲಂ
ಭವತೇ॥ ೫॥

ಪಂಡಿತರತ್ನಂ, ವೈಯ್ಯಾಕರಣಭೂಷಣೇನ, ಮಹಪಂದೂಪಾ,
ಕಾಶೀ ಶೇಷಸುಬ್ರಹ್ಮಣ್ಯಶಾಸ್ತ್ರಿ. ಸಮರ್ಪಿತಾ.

ರಾಜಮನೆಕುಟುಂಬಕ್ಕೆ।
ಈ ಶುಭ ಸಮಯದೋಳ್॥
ರಾಜಭಕ್ತಿಭರಿತ ನಮ್ಮಯ।
ಅರ್ಪಿಸುವ ಅಭಿನಂದನೆಗಳನು॥
ನೂತನ ಪ್ರಭುಗಳಿಗೂ ರಾಜಮನೆ ವಂಶಕ್ಕೂ।
ದುರ್ಗ ಚಾಮುಂಡಿ ಶ್ರೀಕಂಠ ಶ್ರೀರಂಗ।
ನೀಡು ಸರ್ವದಾ ಸನ್ಮಂಗಳಗಳನು।

ಹಾರೈಕೆಗಳು—

ವಿಯಸಿನಲಿ ಕಿರಿಯರು ತರುಣರಲಿ ತರುಣರು।
ಮಹಿಸೂರು ಕುಮಾರರು ನೂತನ ಪ್ರಭುಗಳು।
ಮಾದರಿ ನಾಡಿನ ರತ್ನಸಿಂಹಾಸನದಲಿ।
ಮುಂಡಿಸಿ ವಿರಾಜಿಸಿ ಸಕಲರ ಮನಗಳನು।
ಮೈಸೂರಿನಾ ಸಿರಿಯನು ಉದ್ಧರಿಸಲೆಂದು।
ಕಂಕಣವ ಬಿಗಿದು ಸ್ಥಿರ ಚಿತ್ತವಗೈದು।
ನಿಂತಿರುವ ತರುಣ ಪ್ರಭುವರ್ಯರಿಗೆ।
ದುರ್ಗ ಚಾಮುಂಡಿ, ಶ್ರೀಕಂಠ, ಶ್ರೀರಂಗ।
ಶ್ರೀವರ, ಶಿವಸುತ, ಸರ್ವೇಶ, ಶ್ರೀಪತಿ।
ಕರುಣಿಸು, ಸಕಲ ಆಯುರಾರೋಗ್ಯವನು।
ಭೂಪಾಲಿಪ ಶಕ್ತಿ ಧೈರ್ಯಗಳನು।
ನೀಡಿ ಸಲಹೋ ಕಾರುಣಿಕಾ।
ನವಪ್ರಭುನರ್ಯರು, ಸರ್ವದಾ ಸೌಖ್ಯದಲಿ।
ಸಿರಿವಿಭವದೊಳ್ ಸುಖದಲಿ ಬಾಳಲಿ।
॥ ಚಿರಮುಭವರ್ಧತಾಂ ಯದುಸಂತಾನ ಶ್ರೀಃ॥

ಮೈಸೂರಿನ ಸಿರಿಯರಸರು

ಕರ್ನಾಟಕ ಭೂಮಂಡಲಕ್ಕೆ ಅಲಂಕಾರ ಮಣಿಹಾರದಂತಿರುವ ಮೈಸೂರು ಮಂಡಲವು ಸುಮಾರು 540 ವರ್ಷಗಳಿಂದಲೂ ಚಾರಿತ್ರ್ಯಲ್ಲಿ ಪ್ರಸಿದ್ಧವಾಗಿದೆ. ಈ ನಾಡಿಗೆ ದೊರೆಗಳಾಗಿದ್ದ ಯದುರಾಯರು, ರಾಜವೊಡೆಯರು, ಚಿಕ್ಕದೇವರಾಜವೊಡೆಯರು, ಕಂಠೀರವ ನರಸರಾಜವೊಡೆಯರು ಮೊದಲಾದವರೆಲ್ಲರೂ ಚಂದ್ರವಂಶದ ದೊರೆಗಳ ಸಂತತಿಯಲ್ಲಿ ಜನಿಸಿದವರು. ಅದುದರಿಂದಲೆ ಅತ್ರೇಯಸಗೋತ್ರದ ಅರಸರಾಗಿರುವರು. ನಮ್ಮ ಈಗಿನ ಪ್ರಭುಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರವರು ಯದುವಂಶದ ದೊರೆಗಳಲ್ಲಿ 25 ನೆಯವರಾಗಿದ್ದಾರೆ. ಶ್ರೀರಂಗಪಟ್ಟಣದಲ್ಲಿ ರಾಜ್ಯವಾಳುತ್ತಿದ್ದ ಶ್ರೀರಂಗರಾಯನೆಂಬ ವಿಜಯನಗರದ ಸಂಸ್ಥಾನದ ವೈಸರಾಯ್ ಪ್ರಭುವಿನಿಂದ ಶ್ರೀ ರಾಜವೊಡೆಯರಿಗೆ ರತ್ನಸಿಂಹಾಸನವು ಪ್ರಾಪ್ತವಾಯಿತು. ಅವರ ಕಾಲದಲ್ಲಿ ಎಂದರೆ ಸುಮಾರು 1600 ರಲ್ಲಿ ಮೈಸೂರಲ್ಲಿ ಮಹಾ ವೈಭವದ ನವರಾತ್ರ್ಯುತ್ಸವವು ಆರಂಭವಾಯಿತು. ಸುಮಾರು 350 ವರ್ಷಗಳಿಂದ ನಡೆದು ಬರುತ್ತಿರುವ ಈ ಮಹೋತ್ಸವದ ವೈಖರಿಯು ಜಗತ್ತಿಗೆ ಭೂಷಣವಾಗಿದೆ. ಹಿಂದೂ ಸನಾತನ ಧರ್ಮಪ್ರೇಗೆ ನೆಲೆಯಾಗಿರುವ ಮೈಸೂರಿನ ಅರಸು ಚರಿತ್ರೆಯು ಶಾಸನಗಳಲ್ಲೂ ಗ್ರಂಥಗಳಲ್ಲೂ ಪ್ರಖ್ಯಾತವಾಗಿದೆ. 'ನಾ ನಿಷ್ಣುಃ ಪೃಥಿವೀಪತಿಃ' ಎಂದರೆ ವಿಷ್ಣುವಿನ ಅಂಶವಿಲ್ಲದವರು ದೊರೆಗಳಾಗಲಾರರೆಂಬ ನಾನ್ನುಡಿಯು ಅನ್ವರ್ಥವೆಂಬುದಕ್ಕೆ ನಾಲ್ವಡಿ ಶ್ರೀಕೃಷ್ಣರಾಜ ಪ್ರಭುಗಳ ೩೭ ವರ್ಷದ ರಾಜ್ಯಭಾರವು ಸಾಕ್ಷಿಯಾಗಿದೆ. ಅವರ ಆಳಿಕೆಯ ೩೭ ವರ್ಷಗಳು ಪ್ರಜೆಗಳಿಗೆ ಸಂತೋಷದ ಸುಗ್ಗಿಯ ೩೭ ದಿನಗಳಾಗಿ ಕಳೆದು ಹೋದವು. 'ವ್ಯಾಕರಣ ಶಾಸ್ತ್ರಜ್ಞರು ತತ್ತಾಸ್ಥಾನಾಪೆನ್ನ ಸ್ತದ್ಧರ್ಮಲಭತೇ' ಎಂಬ ನ್ಯಾಯವನ್ನು ಉದಾಹರಿಸುವರು; ಎಂದರೆ ಯಾರು ಸ್ಥಾನಕ್ಕೆ ಯಾರು ಒರುವರೊ ಅವರಲ್ಲಿ ಪೂರ್ವದವರ ಧರ್ಮವೆಲ್ಲವೂ ಬರುವುದು ಎಂಬುದಾಗಿ ಅದರ ತಾತ್ಪರ್ಯ.

ನಾಲ್ವಡಿ ಶ್ರೀಕೃಷ್ಣರಾಜರ ಘನತೆ ವಹಿಸಿದ ಸಂಪ್ರದಾಯ, ಶಿಸ್ತು, ಚಾತುರ್ಯ, ವೈಚಕ್ಷಣ್ಯಗಳನ್ನು ಸಂಪೂರ್ಣವಾಗಿ ಅರಿತು, ರಾಜಕಾರ್ಯಗಳಲ್ಲಿ ಸಂಶಿಕ್ಷಣವನ್ನು ಪಡೆದು ಸಿಂಹಾಸನ ಪದವಿಗೆ ಬಂದಿರುವ ನಮ್ಮ ಈಗಿನ ಪ್ರಭುಗಳು ಮೈಸೂರು ರಾಜಮನೆತನದ ಅರಸುಗಳಲ್ಲಿ ವಿಶ್ವವಿದ್ಯಾಲಯದ ಪದವಿ ಪಡೆದು ಪ್ರಖ್ಯಾತರಾದವರಲ್ಲಿ ಮೊದಲನೆಯವರಾಗಿದ್ದಾರೆ. ಇವರಿಗೆ ಅಡಳಿತದ ಅನುಭವವು ಕಣ್ಣುಮುಂದಿದೆ. ಅಡಳಿತದಲ್ಲಿ ನುರಿತವರಾದ ರಾಜಪ್ರಜಾ ವಿಶ್ವಾಸಿಗಳಾದ ಮಂತ್ರಿಗಳೂ, ಅಧಿಕಾರಿಗಳೂ ಇದ್ದಾರೆ. ಆಂಗ್ಲ ಸಾಮ್ರಾಜ್ಯದ ಪ್ರೀತಿ, ವಿಶ್ವಾಸ ಸ್ನೇಹಗಳಿಗೆ ಮೈಸೂರು ಮೊದಲನೆಯದಾಗಿದೆ. ಈ ಸಂಸ್ಥಾನದಿಂದಲೂ ಈ ಸಂಸ್ಥಾನದ ಒಡೆಯರಿಂದಲೂ ಹಿಂದಿನ ಯುದ್ಧದಲ್ಲಿ ತುಂಬಾ ಸಹಾಯವಾಗಿದೆ. ಈಗಲೂ ಸಹಾಯವಾಗುತ್ತಿದೆ. ಯುದ್ಧ ಜಯಲಕ್ಷ್ಮಿಯ ಸಮಾಗಮದಲ್ಲಿ ಈ ರಾಜ್ಯದಲ್ಲಿ ಜನಿಸಿದ ನಮ್ಮ ಪ್ರಭುಗಳು ಜಯನಾಮಾಂಕಿತರಾದರು ಅವರ ಜನನಾನಂತರದಲ್ಲಿ ಮೈಸೂರಿಗೆ ಯೋಗದಿ ಕಡಮೆಯಾಯಿತು. ದೇಶದಲ್ಲಿ ಕೃಷಿ ಕೈಗಾರಿಕೆಗಳು ಹೆಚ್ಚಿ ಉತ್ಪನ್ನವು ಹೆಚ್ಚಿತು. ವಿದ್ಯಾಭಿವೃದ್ಧಿಯಾಯಿತು. ಕ್ಷಾಮ ಡಾಮರಗಳು ಬಾರದಂತಾದವು.

ಈಗ ಸಿಂಹಾಸನಾಧಿಪತಿಗಳಾಗಿ ನಮ್ಮೆಲ್ಲರಿಗೂ ಎಂದರೆ ಚಿನ್ನದ ನಾಡೂ ಧರ್ಮದ ನಾಡೂ ಎಂಬುದಾಗಿ ನೆಗಳ್ತೆವಡೆದ ಮೈಸೂರು ಸಂಸ್ಥಾನಕ್ಕೆ ದೊರೆಗಳಾಗಿರುವ, ಅಂಗ್ಲ ಸಾಮ್ರಾಜ್ಯಕ್ಕೆ ಅಚ್ಚುಮೆಚ್ಚಿನ ಗೆಳೆಯರಾಗಿರುವ, ಶ್ರೀವೀರ ಜಯಚಾಮರಾಜೇಂದ್ರ ಒಡೆಯರ ವಿವೇಕಪೂರ್ಣವಾದ ರಾಜ್ಯಭಾರವು ನಮ್ಮ ಸಂಸ್ಥಾನಕ್ಕೆ ಸಂತೋಷಪ್ರದವಾಗಿರಲಿ. ಜಯನಾಮಾಂಕಿತರಾದ ಈ ಮಹಾಪ್ರಭುಗಳ ಪುಣ್ಯಾತಿಶಯದಿಂದ ಮಿತ್ರರಾದ ಆಂಗ್ಲೇಯರಿಗೆ ಜಯವು ಲಭಿಸಲಿ. ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯು ಯದುಸರತಾನಕ್ಕೆ ಮಂಗಳವನ್ನು ಮಾಡಲಿ. ರಾಜಮನೆತನವು ಆಚಂದ್ರಾರ್ಕ ಸ್ಥಾಯಿಯಾಗಿರಲಿ.

ಲೋಕಾಸ್ಸಮಸ್ತಾಸ್ಸುಖಿನೋಭವಂತು.

ಸೋ॥ ಕೃಷ್ಣಸ್ವಾಮಿಶಾಸ್ತ್ರೀ,
ಆಸ್ಥಾನ ವಿದ್ವಾನ್, ಮೈಸೂರು.

ಪ್ರಭುಗಳವರ ಜೀವನಚರಿತ್ರೆ

ಯಲ್ಲಿನ ಕೆಲ ವಿಷಯಗಳು

ಶ್ರೀ ಮದ್ಯುವರಾಜ ಶ್ರೀಕಂಠೀರವನರಸರಾಜಒಡೆಯರ ಏಕಮಾತ್ರಪುತ್ರರಾದ ಶ್ರೀವನ್ಮಹಾರಾಜ ಶ್ರೀಜಯಚಾಮರಾಜ ಒಡೆಯರವರು ೧೯೧೯ನೇಇಸ್ವಿ ಜುಲೈ ೧೮ನೇ ತಾರೀಖಿನ ಜನಿಸಿದರು. ಬಾಲ್ಯದಲ್ಲಿ ಅವರು ಅರಸುಗಳಪಾಠಶಾಲೆಯಲ್ಲಿ ವಿ.॥ ಜೆ.ಟಿ.ಟರ್ನರ್‌ರಾಯರವರ ಹತ್ತಿರ ವಿದ್ಯಾಭ್ಯಾಸಮಾಡಿದರು

ಎಸ್ ಎಸ್,ಎಲ್,ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಶ್ರೀಜಯಚಾಮರಾಜ ಒಡೆಯರವರು ಸಾರ್ವಜನಿಕರಿಗಾಗಿ ಏರ್ಪಾಟಾಗಿದ್ದ ಕಾಲೇಜಿನಲ್ಲಿ ತಮ್ಮ ಪ್ರಜೆಗಳೊಡನೆಯೇ ವ್ಯಾಸಂಗ ಮಾಡಲು ಪ್ರಾರಂಭಿಸಿದರು ಮುಂದೆ ಅರಸರಾಗತಕ್ಕವರು ಈರೀತಿ ಸಾರ್ವಜನಿಕ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ಮೈಸೂರು ಇತಿಹಾಸದಲ್ಲಿ ಇದೇ ಮೊದಲು.

ಇಂಟರಮೀಡಿಯೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ಅವರು ಇತಿಹಾಸ ರಾಜಕೀಯ ಮತ್ತು ಅರ್ಥಶಾಸ್ತ್ರಗಳನ್ನು ವಿಶೇಷರೀತಿಯಿಂದ ಅಧ್ಯಾಯನಮಾಡಿದರು. ರಾಜಕೀಯ ಸೈವ.ಸ್ಯೆಗಳು ಮತ್ತು ಆಡಳಿತ ವಿಚಾರಗಳ ಚರ್ಚೆ ಮತ್ತು ವ್ಯಾಸಂಗದಲ್ಲಿ ಅವರಿಗೆ ಇಷ್ಟ. ಭಾರತದ ಮತ್ತು ಅಂತರರಾಷ್ಟ್ರೀಯ ಅಧುನಿಕ ಇತಿಹಾಸವನ್ನು ಅವರು ಬಹಳ ಶ್ರದ್ಧೆಯಿಂದ ಓದುತ್ತಿದ್ದರು. ವಿಶ್ವವಿದ್ಯಾಲಯದಲ್ಲಿ ಅವರ ವೇಳ್ಯಂಡ

ಯವಾಗಿದೆ. ಈಗಲೂ ಸಹಾಯವಾಗುತ್ತಿದೆ. ಯುದ್ಧ ಜಯಲಕ್ಷ್ಮಿಯ ಸಮಾಗಮದಲ್ಲಿ ಈ ರಾಜ್ಯದಲ್ಲಿ ಜನಿಸಿದ ನಮ್ಮ ಪ್ರಭುಗಳು ಜಯನಾಮಾಂಕಿತರಾದರು ಅವರ ಜನನಾನಂತರದಲ್ಲಿ ಮೈಸೂರಿಗೆ ಯೋಗದಿ ಕಡಮೆಯಾಯಿತು. ದೇಶದಲ್ಲಿ ಕೃಷಿ ಕೈಗಾರಿಕೆಗಳು ಹೆಚ್ಚಿ ಉತ್ಪನ್ನವು ಹೆಚ್ಚಿತು. ವಿದ್ಯಾಭಿವೃದ್ಧಿಯಾಯಿತು. ಕ್ಷಾಮ ಡಾಮರಗಳು ಬಾರದಂತಾದವು.

ಈಗ ಸಿಂಹಾಸನಾಧಿಪತಿಗಳಾಗಿ ನಮ್ಮೆಲ್ಲರಿಗೂ ಎಂದರೆ ಚಿನ್ನದ ನಾಡೂ ಧರ್ಮದ ನಾಡೂ ಎಂಬುದಾಗಿ ನೆಗಳ್ತೆವಡೆದ ಮೈಸೂರು ಸಂಸ್ಥಾನಕ್ಕೆ ದೊರೆಗಳಾಗಿರುವ, ಅಂಗ್ಲ ಸಾಮ್ರಾಜ್ಯಕ್ಕೆ ಅಚ್ಚುಮೆಚ್ಚಿನ ಗೆಳೆಯರಾಗಿರುವ, ಶ್ರೀವೀರ ಜಯಚಾಮರಾಜೇಂದ್ರ ಒಡೆಯರ ವಿವೇಕಪೂರ್ಣವಾದ ರಾಜ್ಯಭಾರವು ನಮ್ಮ ಸಂಸ್ಥಾನಕ್ಕೆ ಸಂತೋಷಪ್ರದವಾಗಿರಲಿ. ಜಯನಾಮಾಂಕಿತರಾದ ಈ ಮಹಾಪ್ರಭುಗಳ ಪುಣ್ಯಾತಿಶಯದಿಂದ ಮಿತ್ರರಾದ ಆಂಗ್ಲೇಯರಿಗೆ ಜಯವು ಲಭಿಸಲಿ. ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯು ಯದುಸರತಾನಕ್ಕೆ ಮಂಗಳವನ್ನು ಮಾಡಲಿ. ರಾಜಮನೆತನವು ಆಚಂದ್ರಾರ್ಕ ಸ್ಥಾಯಿಯಾಗಿರಲಿ.

ಲೋಕಾಸ್ಸಮಸ್ತಾಸ್ಸುಖಿನೋಭವಂತು.

ಸೋ॥ ಕೃಷ್ಣಸ್ವಾಮಿಶಾಸ್ತ್ರೀ,
ಆಸ್ಥಾನ ವಿದ್ವಾನ್, ಮೈಸೂರು.

ವ್ಯಾಸಂಗಗಳು ಬಹಳಸಮರ್ಪಕವಾಗಿ ನಡೆದವು. ಮೈಸೂರು ಮಹಾರಾಜ ಕಾಲೇಜಿನ ಇತಿಹಾಸ ಸಂಘಕ್ಕೆ ಏಕವಾಕ್ಯದಿಂದ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆ ಸಂದರ್ಭದಲ್ಲಿ ಅವರು ಅಧ್ಯಕ್ಷಪೀಠದಿಂದ ಮಾಡಿದ ಪ್ರಾರಂಭ ಭಾಷಣದಲ್ಲಿ ಮುಂದೆನಡೆಯಲಿದ್ದ ಚೀನಾ ಜಪಾನ್ ಯುದ್ಧವನ್ನು ಸೂಚಿಸಿದ್ದು ಇವರ ವಿಚಕ್ಷಣೆಯ ನಿದರ್ಶನವಾಗಿರುತ್ತದೆ.

ಹೊಸಗನ್ನಡ ಸಾಹಿತ್ಯದಲ್ಲಿ ಮತ್ತು ಆಗೀತಾಸೆ ಉದಿಯಮಾನರಾಗುತ್ತಿದ್ದ ನವಸಾಹಿತಿಗಳಲ್ಲಿ ಅವರು ಹೆಚ್ಚು ಶ್ರದ್ಧೆಯುಳ್ಳವರಾಗಿದ್ದರು.

ವಿದ್ಯಾರ್ಥಿಗಳಿಂದ ಪ್ರಾರಂಭಿಸಲ್ಪಡುವ ಪ್ರತಿಯೊಂದು ಧರ್ಮ ಮತ್ತು ನಿಧಿಗೆ ಅವರ ಮುಕ್ತಹಸ್ತದಿಂದ ದಾನಮಾಡುತ್ತಿದ್ದರು. ತಮ್ಮ ದಾನಕ್ಕೂ ಇತರ ವಿದ್ಯಾರ್ಥಿಗಳ ದಾನಕ್ಕೂ ಇರುವ ಅಂತರವನ್ನು ತಿಳಿಯಬಾರದೆಂದು ಅವರು 'ಮೊದಲು ಎಲ್ಲರ ಕೈಲೂ ಚಂದಾ ಹಾಕಿಸಿ ನಂತರ ನನ್ನ ಹತ್ತಿರ ತೆಗೆದುಕೊಂಡು ಬನ್ನಿ. ಸಾಲದೆಹೋಗುವ ಹಣವನ್ನು ನಾನು ಕೊಡುತ್ತೇನೆ" ಎಂದು ಹೇಳುವದು ಅವರ ಪದ್ಧತಿಯಾಗಿದ್ದಿತು. ವಿಶ್ವವಿದ್ಯಾನಿಲಯ ಪಠಣಾಗೃಹವು ಅವರ ಉದಾರ ದಾನದ ನಿದರ್ಶನವಾಗಿದೆ. ಅವರ ಸಹಾಯವಿಲ್ಲದಿದ್ದರೆ ಪಠಣಾಗೃಹವು ಅಷ್ಟೊಂದು ಅಧುನಿಕ ಅನುಕೂಲಗಳನ್ನು ಪಡೆದಿರುವುದು ಸಾಧ್ಯವಿರಲಿಲ್ಲ.

ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಿಂದ ತಿಳಿದಷ್ಟು ವಿಷಯಗಳಿಂದ ತೃಪ್ತರಾಗುವುದು ಅದರಿಂದ ಸಾಧ್ಯವಿರಲಿಲ್ಲ. ಪುಸ್ತಕಗಳನ್ನು ಓದಿ ಅವರು ಜ್ಞಾನಾರ್ಜನೆ ಮಾಡುತ್ತಿದ್ದರು. ಕೆಲವು ವರ್ಷಗಳಲ್ಲಿ ದೊಡ್ಡ ಗ್ರಂಥಾಲಯವೊಂದನ್ನು ಅವರು ಸಂಗ್ರಹಿಸಿದರು. ವೈದುಷ್ಯ,ಅಭಿರುಚಿ ಪ್ರಯೋಜನ ಇವೆಲ್ಲ ದೃಷ್ಟಿಯಿಂದ ಉತ್ತಮ ಪುಸ್ತಕಗಳನ್ನು ಪರಿಪಡದು ಅವರ ಅಭ್ಯಾಸವಾಗಿತ್ತು.

ತನಗೆ ತೋರಿದ ವಿಷಯಗಳನ್ನು ಕುರಿತು ಅಧ್ಯಾಪಕರೊಡನೆ ಆಗಿಂದಾಗ್ಯೆ ಚರ್ಚೆನಡೆಸುವುದು ಅವರ ಪದ್ಧತಿಯಾಗಿತ್ತು ಇಂತಹ ಚರ್ಚೆಗಳಲ್ಲಿ ಅವರ ಬುದ್ಧಿ ನೈಪುಣ್ಯ ನಿವೇಚನ ಶಕ್ತಿ ಮತ್ತು ಶೀಕ್ಷ್ಣತೆಯು ವ್ಯಕ್ತವಾಗುತಿತ್ತು.

ಅವರು ಪಾಠಕಾಲ ಬಹಳ ಮುಂದಾಗಿಯೇ ಕೆಲಸಕಾರ್ಯಗಳಿಗೆ ಪ್ರಾರಂಭಿಸಿ ಪ್ರತಿ ದಿನ ಗೊತ್ತಾದ ರೀತಿ ಕಾರ್ಯಗಳನ್ನು ನಡೆಸುತ್ತಿದ್ದರು

ಸಂಗೀತ, ಹಿಂದಿ, ಧರ್ಮಶಾಸ್ತ್ರ ವ್ಯಾಸಂಗ, ಪೂಜೆ ಟೆನಿಸ್ ರ್ಯಾಕೆಟ್ ಮುಂತಾದ ಆಟಗಳು ಮತ್ತು ಪಾಠಪ್ರವಚನ ಈವುಗಳಲ್ಲಿ ಅವರ ಕಾಲವು ಕಳೆಯುತ್ತಿತ್ತು.

ನಮ್ಮ ನೂತದ ಪ್ರಭುಗಳ ಕಾಲದಲ್ಲಿ ಮಾದರಿ ಮೈಸೂರಿನ ಕೀರ್ತಿಯೂ ಮತ್ತು ಪ್ರಜಾಸೌಖ್ಯವೂ ಮತ್ತೂ ಹೆಚ್ಚಲೆಂದು ಕೋರುತ್ತೇವೆ. ಪ್ರಭುಗಳಿಗೂ ರಾಜಮನೆತನದವರಿಗೂ ಪರಮಾತ್ಮನು ಸಕಲ ಸನ್ಮಂಗಳಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

Founded 1917

SATYAVADI

ನಿಮ್ಮ ಚರ್ಮವೇ ನಿಮ್ಮ ಆರೋಗ್ಯಭಾಗ್ಯವು

ನಾವು ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಿಲೀ ಡಾಕ್ಟರಿಂದ ಪರೀಕ್ಷೆ ಮಾಡಿಸಬೇಕಾದ ಪ್ರಮೇಯವು ಒದಗಿದಾಗ "ಈತನು ಚಿಕಿತ್ಸಾಶಾಸ್ತ್ರ ಪ್ರವೀಣನೋ ?" ಎಂಬ ವಿಷಯವನ್ನು ಪೃಥಮಥಃ ಯೋಚಿಸುವೆವು. ಆ ಡಾಕ್ಟರನ ವೇಷ ಭರವಸೆ ಇಡಬಹುದೇ ಎಂಬುವುದನ್ನು ಕೂಡ ಅರಿಯು ಜಾಗರೂಕರಾಗುತ್ತೇವೆ.

ನಿಜವಾಗಿ, ಸರಿಯಾದ ಶಾಸ್ತ್ರಜ್ಞಾನವಿಲ್ಲದ ಅಥವಾ ಅನುಭವವಿಲ್ಲದ ಡಾಕ್ಟರುಗಳ ವಶಕ್ಕೆ ನಮ್ಮ ಕಣ್ಣುಗಳನ್ನಾಗಲೀ ಹಲ್ಲುಗಳನ್ನಾಗಲೀ ಚಿಕಿತ್ಸೆಗಾಗಿ ಒಪ್ಪಿಸತಕ್ಕುದಲ್ಲ.

ಇನ್ನು ನಿಮ್ಮ ಚರ್ಮದ ವಿಷಯವೋ ?

ನೀವು ದೇಹಸೌಂದರ್ಯಕ್ಕಾಗಿ ಉಪಯೋಗಿಸುವ ಸಾಬೂನಿನ ವಿಷಯವೇನು ? ಅದು ಬೆರಿಕೆಯಿಲ್ಲದ ಕಚ್ಚಾ ಪದಾರ್ಥಗಳಿಂದ ಆರೋಗ್ಯ ವಿಧಾನದಿಂದ ತಯಾರಿಸಲ್ಪಟ್ಟಿದೆಯೇ ? ಎಂಬ ವಿಷಯವನ್ನು ಗಮನದಲ್ಲಿಟ್ಟಿರುವಿರಾ ? ಅಥವಾ ಬೇರೊಬ್ಬರು ಉಪಯೋಗಿಸುತ್ತಿರುವರೆಂದು ಯಾವದೋ ಒಂದು ತರಹದ ಸಾಬೂನನ್ನು ಉಪಯೋಗಿಸುತ್ತಿರುವಿರಾ ? ಅಥವಾ ಜಾಹಿರಾತುಗಳ ಮನಮೋಹಕರವಾದ ಮಾತುಗಳಿಗೆ ಮರುಳಾಗಿ ಹೋಗಿರುವಿರಾ ?

ನಿಮ್ಮ ಚರ್ಮದ ರಕ್ಷಣೆಯು ನೀವು ಉಪಯೋಗಿಸುವ ಸಾಬೂನನ್ನು ಅವಲಂಬಿಸುತ್ತದೆ. ದೇಹಾರೋಗ್ಯವಾದರೋ ಚರ್ಮದ ಸೌಂದರ್ಯವನ್ನವಲಂಬಿಸಿರುತ್ತದೆ. ವ್ಯಾಧಿಗಳನ್ನು ಬಗೆಬಗೆಯ ತೈಲಗಳ ಮೂಲಕ ಗುಣಪಡಿಸುವ ಪದ್ಧತಿಯು "ಅಷ್ಟಾಂಗಹೃದಯ" ವೆಂಬ ಪ್ರಾಚೀನ ವೈದ್ಯಗ್ರಂಥದಲ್ಲಿ ತಿಳಿಸಿರುತ್ತದೆ ತೈಲ ಮತ್ತು ಪನ್ನಾರೆ ಸಾಪೂನುಗಳ ಮುಖೇನ ಕ್ರಿಮಿಗಳಕೋಟೆಯನ್ನು ಎದುರಿಸಲಾಗುತ್ತಿತ್ತು.

ಮೈಸೂರು ಗಂಧದ ಸಾಬೂನಿನ ವಿಷಯದಲ್ಲಿ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ. ಇದರ ತಯಾರಿಯಲ್ಲಿ ಉಪಯೋಗಿಸುವ ಪ್ರತಿ ಪದಾರ್ಥವೂ ಜೆನ್ನಾಗಿ ಪರಿಶೋಧಿಸಲ್ಪಡುತ್ತೆ.

ಈ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಪದಾರ್ಥಗಳಲ್ಲಿ ಯಾವ ಬಗೆಯ ಕಲ್ಮಿ ಪದಾರ್ಥವಾಗಲೀ ಹಾನಿಕರವಾದ ಪದಾರ್ಥವಾಗಲೀ ಸೇರಿರುವದಿಲ್ಲವೆಂಬ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿನ ವಿಷಯದಲ್ಲಿಯೂ ಅನ್ವಯಿಸುತ್ತದೆ.

The Satyavadi Limited

(Incorporated in Mysore State)

MYSORE

A few shares of Rs. 5 are available

ಮನೆ ಮತ್ತು ಸೈಟುಗಳನ್ನೂ ಸರ್ಕಾರಿ ಸಾಲದಪತ್ರ ಮತ್ತು ಕಂಪೆನಿ ಷೇರುಗಳನ್ನೂ

ಕೊಂಡುಕೊಳ್ಳುತ್ತೇವೆ ಮತ್ತು ಮಾರುತ್ತೇವೆ,

ಬೇಕಾದವರು ತಿಳಿಸಬಹುದು.

ಪ್ರಿಂಟಿಂಗ್ ವಿಚಾರದಲ್ಲಿ

ನಮ್ಮಲ್ಲಿ ಅಧಿಕ ಸೌಲಭ್ಯಗಳಿವೆ.

ಸತ್ಯವಾದಿ ಲಿಮಿಟೆಡ್,

ಚಾಮರಾಜಪುರಂ, ಮೈಸೂರು

ಈ ಭರವಸೆಯು ಮೈಸೂರು ಸ್ಯಾಂಡಲ್ ಸೋಪಿಗೆ ಮಾತ್ರವೇ ಅಲ್ಲ. ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಒಗೆಯ ಸಾಬೂನುಗಳಿಗೂ ಈ ಭರವಸೆಯು ಅನ್ವಯಿಸುತ್ತದೆ.— ಮೈಸೂರು ಜಾಸ್ಮಿ ಸೋಪು, ಮೈಸೂರು ಗುಲಾಬ್ ಸೋಪು, ಮೈಸೂರು ಲೆವೆಂಡರ್ ಸೋಪು, ಮೈಸೂರು ಬಾತ್ ಟ್ಯಾಬ್ಲೆಟ್, ಮೈಸೂರು ಪೊಂಗಂ ಬೇವು ಸೋಪು, ಮೈಸೂರು ಟರ್ಕಿಷ್ ಬಾತ್ ಸೋಪು, ಮೈಸೂರು ವಾಷಿಂಗ್ ಸೋಪು, ಮೈಸೂರು ಫೇರಿ ಫ್ಲೇಕ್ಸ್, ಮೈಸೂರು ಕಾರ್ಬಾಲಿಕ್ ಸೋಪು, ಮೈಸೂರು ಲಿಕ್ವಿಡ್ ಸೋಪು, ಟಿಕ್ಚರ್ಲ್ ಸೋಪು, ಇಕ್ಸೆಕ್ಟಿಸೈಡಲ್ ಸೋಪು ಸಾಫ್ಟ್ ಸೋಪು. ಈ ಎಲ್ಲಾ ಸೋಪುಗಳೂ ಪರಿಶುದ್ಧ ಹಾಗೂ ಶ್ರೇಷ್ಠವಾದುವು.

ಇಷ್ಟು ಮಾತ್ರವೇ ಅಲ್ಲ. ಆಧುನಿಕ ಮಹನೀಯರಿಗೂ ಮಹಿಳೆಯರಿಗೂ ಅನುದಿನವೂ ಅವಶ್ಯಕಗಳಾಗಿರುವ ಈ ಕೆಳಗೆ ವಿವರಿಸಿರುವ ಪದಾರ್ಥಗಳ ವಿಷಯದಲ್ಲಿಯೂ ಮೈಸೂರು ಸರ್ಕಾರವು ಭರವಸೆಯನ್ನು ಕೊಡುತ್ತದೆ.— ಮೈಸೂರು ಪೆರಲೈಟ್ ವ್ಯಾನಿಷಿಂಗ್ ಕ್ರೀಂ, ಮೈಸೂರು ಬಿಲಾಸಿನಿ ಬ್ರಿಲಿಯಂಟೈನ್, ಮೈಸೂರು ಫೇರಿ ಪೋಮೇಡ್, ಮೈಸೂರು ಕ್ಯಾಲಟಿ ಷೇವಿಂಗ್ ಸ್ಟಿಕ್, ಮೈಸೂರು ಡೆಂಟಲ್ ಕ್ರೀಂ ಮೈಸೂರು ಬ್ಲೂಡೆಂಟ್, ಮೈಸೂರು ಬೂಟ್ ಪಾಲಿಷ್ (ಬ್ರೌನ್, ಬ್ಲ್ಯಾಕ್, ಡಾರ್ಕ್‌ಟ್ಯಾನ್) ಮೈಸೂರು ಕ್ವಿಕ್ ಫಿಕ್ಸ್, ಐಡೋಕೂರ್.

VAIDYARATNAM

P. S. Varier's

Arya Vaidya Sala

Kottakkal

Branches — Calicut & Palghat

The pioneer ayurvedic institution in Southern India with over 35 years reputation. The ever increasing popularity of this firm all over India, Burma Ceylon, Malaya and other colonies alone stands for itsunequalled reliability. All sorts of ayurvedic preparations prepared under scientific methods are always kept here in stock for sale Dhara, Navarakkizhi, Pizhichil and other special treatments of Malabar are conducted under Vaidyaratnam's own supervision. Treatment through correspondance a speciality. Vaidya ratnam vsits his Calicut branch on almost every 1 st and 3 rd Sundays and Palghat Branch on 2 nd and 4th Sundays.

CHYAVANAPRAS

From the time of ancient sages this medicine is reknownedfor its unequalled efficacy in retaining youthfulness. It is so termed because Sage Chyavan was able to regain his youth at nineties with its use. It is a great tonic for boys of weak health and it prevents old age in young men. Besides it is very effective in all sorts of Respiratory complaints, Heart diseases, Rheumatism, and many other diseases. Direction — ½ to 2 tolas twice daily after food. Price per pound Rs 4.

For further particulars and free catologues pleaseapply to—

The Manager, Arya Vaidyasala,

KOTTAKAL (S.Malabar)

ಮುಂದಿನ ವಾರದ ಸತ್ಯವಾದಿ ಪತ್ರಿಕೆಯನ್ನು ಓದಲು ತಪ್ಪಿಸಿ

Edited, Printed & published by M .S. Krishna Rao, at the Satyavadi Press, Chamaraja Agrahar Mysore